ಕರ್ನಾಟಕ ವಿಧಾನ ಪರಿಷತ್ತು	
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	910
ಸದಸ್ಯರ ಹೆಸರು:	ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ:	20-09-2021
ಉತ್ತರಿಸುವವರು:	ಮಾನ್ಯ ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಅರಣ್ಯ ಇಲಾಖೆಯಲ್ಲಿ ಬೆಂಗಳೂರು ಮತ್ತು ಬಳ್ಳಾರಿ ವೃತ್ತಗಳಲ್ಲಿ ಜೆ.ಬಿ.ಐ.ಸಿ. ಯೋಜನೆಯಡಿ ರಿಕ್ತ ಸ್ಥಾನಗಳನ್ನು ಸರ್ಕಾರ ಪರಿಗಣಿಸಿದೆಯೇ; (ಮಾಹಿತಿ ಒದಗಿಸುವುದು)	-ಇಲ್ಲ- ಅರಣ್ಯ ಇಲಾಖೆಯು 1983-84ನೇ ಸಾಲಿನಿಂದ 1992-93ನೇ ಸಾಲಿನವರೆಗೆ ವಿಶ್ವ ಬ್ಯಾಂಕ್ ನೆರವಿನ ಸಾಮಾಜಿಕ ಅರಣ್ಯ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು, ಈ ಯೋಜನೆಯ ಅನುಷ್ಠಾನಕ್ಕೆ ವಿವಿಧ ಹಂತದಲ್ಲಿ 1314 ತಾತ್ಕಾಲಿಕ ಹುದ್ದೆಗಳನ್ನು ಸೃಜಿಸಲಾಗಿತ್ತು. ಈ ಯೋಜನೆಯು ನಂತರ ಜೆ.ಬಿ.ಐ.ಸಿ ನೆರವಿನ ಪೂರ್ವಪುಸ್ಥ ಭೂಮಿಯ ಅರಣ್ಯೀಕರಣ ಮತ್ತು ಪರಿಸರ ಯೋಜನೆಯಾಗಿ ದಿನಾಂಕ:31.03.2002 ರಂದು ಮುಕ್ತಾಯಗೊಂಡಿತ್ತು. ಈ ಹುದ್ದೆಗಳನ್ನು ಯೋಜನೆ ಲೆಕ್ಕ ಶೀರ್ಷಿಕೆಯಡಿ ಸೃಜಿಸಲಾಗಿದ್ದು, ವೇತನ ಮತ್ತು ಭತ್ಯೆಗಳನ್ನು ಯೋಜನೆ ಲೆಕ್ಕ ಶೀರ್ಷಿಕೆಯಡಿ ಪಾವತಿಸಲಾಗುತ್ತಿತ್ತು.
		ಸರ್ಕಾರದ ಆದೇಶ ಸಂಖ್ಯೆ: ಅಪಜೀ 165 ಎಫ್ಎಪಿ 2002, ದಿ:14.02.2003 ರಲ್ಲಿ ಮೇಲ್ಕಂಡ ಹುದ್ದೆಗಳಿಗೆ ಪಾವತಿ ಮಾಡಲಾಗುತ್ತಿದ್ದ ವೇತನ ಮತ್ತು ಭತ್ಯೆಗಳನ್ನು ಪಾವತಿಸಲು ಯೋಜನೆ ಲೆಕ್ಕ ಶೀರ್ಷಿಕೆಯಿಂದ ಯೋಜನೇತರ ಲೆಕ್ಕ ಶೀರ್ಷಿಕೆಯಡಿಯಲ್ಲಿ ಬದಲಾಯಿಸಲಾಗಿರುತ್ತದೆ. ಹೀಗಾಗಿ ವೃತ್ತದವರು ಮೇಲಿನ ಸರ್ಕಾರಿ ಆದೇಶದಂತೆ ರಿಕ್ತ ಸ್ಥಾನಗಳೆಂದು ಪರಿಗಣಿಸಲು ನಿಯಮಾನುಸಾರ ಆಸ್ಪದವಿರುವುದಿಲ್ಲ.
ಆ.	ಜೇಷ್ಠತಾ ಪಟ್ಟಿಯನ್ನು ಸರಿ ಪಡಿಸಲು ನೇಮಕವಾದ ಸಮಿತಿಯ ವರದಿಯನ್ನು ಸರ್ಕಾರ ಪಾಲಿಸಿರುವ ಬಗ್ಗೆ ಮಾಹಿತಿ ಒದಗಿಸುವುದು;	ಸರ್ಕಾರದ ಆದೇಶ ಸಂಖ್ಯೆ: ಅಪಜೀ 116 ಅಪಸೇ 2019 ಬೆಂಗಳೂರು ದಿನಾಂಕ:11-11-2019ರಲ್ಲಿ ಅರಣ್ಯ ಇಲಾಖೆಯ ವಿವಿಧ ವೃಂದಗಳಲ್ಲಿ ಸೇವಾಹಿರಿತನ ನಿಗದಿಪಡಿಸುವಲ್ಲಿ ಹಾಗೂ ಪದೋನ್ನತಿ ಸಂದರ್ಭಗಳಲ್ಲಿ ನ್ಯೂನ್ಯತೆಗಳು ಉಂಟಾಗಿರುವ ಬಗ್ಗೆ ಪರಿಶೀಲಿಸಲು ಸಮಿತಿಯನ್ನು ರಚಿಸಲಾಗಿತ್ತು. ಸಮಿತಿಯ ವರದಿಯನ್ನು ಸರ್ಕಾರವು ತನ್ನ ಪತ್ರ ದಿನಾಂಕ: 27-05-2020ರಲ್ಲಿ ಸಮಿತಿಯು ಶಿಫಾರಸ್ಸು ಮಾಡಿರುವಂತೆ ಕಾಯ್ದೆ / ನಿಯಮಗಳು / ಅಧಿಸೂಚನೆಗಳು / ಸರ್ಕಾರಿ ಆದೇಶಗಳು ಮತ್ತು ಸುತ್ತೋಲೆಗಳಲ್ಲಿನ ನಿರ್ದೇಶನಗಳ ಪ್ರಕಾರ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಶ್ರೀ

		ಬಿ.ಕೆ.ಪವಿತ್ರ-2 ಪ್ರಕರಣದಲ್ಲಿ ದಿನಾಂಕ:10-05-2019 ರಂದು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಚಾಲ್ತಿಯಲ್ಲಿರುವ ಸರ್ಕಾರದ ನಿಯಮಗಳು / ಅಧಿಕೃತ ಜ್ಞಾಪನಗಳು / ಆದೇಶಗಳು ಮತ್ತು ಸುತ್ತೋಲೆಗಳನ್ವಯ ನೀಡಿರುವ ಅಂಶಗಳನ್ನು ಗಣನೆಗೆ ತೆಗೆದುಕೊಂಡು ನಿಯಮಾನುಸಾರ ಕರಡು ತಾತ್ಕಾಲಿಕ ಜೇಷ್ಠತಾ ಪಟ್ಟಿಗಳನ್ನು ಪ್ರಚುರಪಡಿಸಿ, ಆಕ್ಷೇಪಣೆಗಳನ್ನು ಆಹ್ವಾನಿಸಲು 15 ದಿನಗಳ ಕಾಲಾವಕಾಶ ನೀಡಿ, ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಅಂತಿಮ ಜೇಷ್ಠತಾ ಪಟ್ಟಿಗಳನ್ನು ಎಲ್ಲಾ ಸಕ್ಷಮ ಪ್ರಾಧಿಕಾರಿಗಳು ಸಹ ಏಕಕಾಲಕ್ಕೆ ಹೊರಡಿಸಲು ಅನುವಾಗುವಂತೆ ಎಲ್ಲಾ ಸಕ್ಷಮ ಪ್ರಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿರುತ್ತದೆ. ಅದರಂತೆ, ವಿವಿಧ ವೃಂದಗಳ ಜೇಷ್ಠತಾ ಪಟ್ಟಿಗಳನ್ನು ತಯಾರಿಸಿ ಪ್ರಕಟಿಸಲಾಗಿರುತ್ತದೆ.
ಇ.	ಜೇಷ್ಠತಾ ಪಟ್ಟಿಯನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಬಳ್ಳಾರಿ ವೃತ್ತದ ಜೇಷ್ಠತಾ ಪಟ್ಟಿಯ ಅನುಬಂಧ-1ರಲ್ಲಿ ಸರ್ಕಾರವು ಜೆ.ಬಿ.ಐ.ಸಿ. ಯೋಜನೆಯಡಿ 1983-84ರಲ್ಲಿ ಬಳ್ಳಾರಿ ವೃತ್ತಕ್ಕೆ ಸೃಜಿಸಿ ನೀಡಿರುವ 45 ಉ.ವ.ಅ.ಅ. ಹುದ್ದೆಗಳನ್ನು ನೇಮಕ ಮಾಡಿಕೊಂಡಿರುವ ಮಾಹಿತಿ ಒದಗಿಸುವುದು)	ಜೇಷ್ಠತಾ ಪಟ್ಟಿಗಳನ್ನು ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು 1957ರ ಅನುಸಾರ ಎಲ್ಲಾ ವೃತ್ತಗಳಲ್ಲಿ ತಯಾರಿಸಿ ಪ್ರಕಟಿಸಲಾಗಿರುತ್ತದೆ. ಜೇಷ್ಠತಾ ಪಟ್ಟಿ ತಯಾರಿಕೆಯು ಒಂದು ಅರೆನ್ಯಾಯಿಕ ಪ್ರಕ್ರಿಯೆ (Quasi judicial process) ಯಾಗಿದ್ದು, ನ್ಯಾಯಾಲಯ / ನ್ಯಾಯ ಮಂಡಳಿಗಳ (Courts of law) ಆದೇಶ / ತೀರ್ಪುಗಳಿಲ್ಲದೇ ಜೇಷ್ಠತಾ ಪಟ್ಟಿಗಳನ್ನು ಸುವ್ಯಕ್ತ ದೋಷ (patent errors) ಗಳನ್ನು ಹೊರತುಪಡಿಸಿ ಪರಿಷ್ಕರಿಸಲು ಅವಕಾಶವಿರುವುದಿಲ್ಲ. ಬಳ್ಳಾರಿ ವೃತ್ತದಲ್ಲಿ ದಿನಾಂಕ:06-08-2020ರ ಅಧಿಕೃತ ಜ್ಞಾಪನ ಪತ್ರದಲ್ಲಿ ಹೊರಡಿಸಿರುವ ಉಪ ವಲಯ ಅರಣ್ಯಾಧಿಕಾರಿ ಹಾಗೂ ಮೋಜಣಿದಾರರ ಅಂತಿಮ ಜೇಷ್ಠತಾ ಪಟ್ಟಿಯ ಅನುಬಂಧ-1ರ ದಿನಾಂಕ:07-03-1980 ರಿಂದ 18-04-1985 ರವರೆಗಿನ ಬ್ಲಾಕ್ ಸಂಖ್ಯೆ:02ರಲ್ಲಿ ವಿಶ್ವ ಬ್ಯಾಂಕ್ ನೆರವಿನ ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ಬಳ್ಳಾರಿ ವೃತ್ತದಲ್ಲಿ ಮಂಜೂರಾದ 45 ಉಪ ವಲಯ ಅರಣ್ಯಾಧಿಕಾರಿ ಹಾಗೂ ಮೋಜಣಿದಾರರ ಹುದ್ದೆಗಳನ್ನು ಅಂದಿನ 33:66 ಅನುಪಾತದಲ್ಲಿ ಗಣನೆಗೆ ತೆಗೆದುಕೊಳ್ಳಲಾಗಿರುತ್ತದೆ. ಆದರೆ, 2003ನೇ ಸಾಲಿನ ಅವಧಿಯಲ್ಲಿ ಜೆ.ಬಿ.ಐ.ಸಿ. ಯೋಜನೆಯಡಿಯಲ್ಲಿ ರಿಕ್ತ ಸ್ಥಾನಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ.

ಕಡತ ಸಂಖ್ಯೆ: ಅಪಜೀ 189 ಅಅಸೇ 2021

(ಉಮೇಶ ವಿ. ಕತ್ತಿ)
ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.